ನಂ.1 ವಿಜಯವಾಣಿ
ಕನ್ನಡದ ನಂ.1 ದಿನಪತ್ರಿಕೆ

ಬಿಕೆಇಸಿ ಅಧ್ಯಕ್ಷ ದಿಲೀಪಕುಮಾರ ತಾಳಂಪಳ್ಳಿ ಸಲಹೆ | ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜಿನಲ್ಲಿ 26ನೇ ವಾರ್ಷಿಕೋತ್ಸವ

# ಹೊಸ ಹೊಸ ಸಂಶೋಧನೆಯತ್ತ ವಿದ್ಯಾರ್ಥಿಗಳು ಹರಿಸಲಿ ಚಿತ್ತ

■ ವಿಜಯವಾಣಿ ಸುದ್ದಿಜಾಲ ಬಸವಕಲ್ಯಾಣ

ಸ್ಪರ್ಧಾತ್ಮಕ ಯುಗದಲ್ಲಿ ಪದವಿ ಪಡೆದರೆ ಸಾಲದು. ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಹೊಸ ಸಂಶೋಧನೆಗೆ ಮುಂದಾಗಬೇಕು ಎಂದು ಬಿಇಟಿ ಉಪಾಧ್ಯಕ್ಷರಾದ ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜು ಅಧ್ಯಕ್ಷ ದಿಲೀಪಕುಮಾರ ತಾಳಂಪಳ್ಳಿ ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು.

ಬಸವಕಲ್ಯಾಣ ಎಜುಕೇಷನಲ್ ಟ್ರಸ್ಟ್(ಬಿಇಟಿ)ನ ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜಿನಲ್ಲಿ ಭಾನುವಾರ ಸಂಜೆ ಆಯೋಜಿಸಿದ್ದ 26ನೇ ವಾರ್ಷಿಕೋತ್ಸವ ಅನ್ವೇಷಣಾ ಕಾರ್ಯಕ್ರಮ ಉದ್ಘಾಟಿಸಿದ ಅವರು, ನಮ್ಮ-ನಿಮ್ಮೆಲರ ಈ ಸಂಸ್ಥೆ ಶೈಕ್ಷಣಿಕ ಹಾಗೂ ಸಂಶೋಧನಾ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದೆ. ಅಗತ್ಯ ಸಿದ್ಧತೆಯೊಂದಿಗೆ ಸ್ಪರ್ಧಾತ್ಮಕ ಪರೀಕ್ಷೆ ಬರೆದು ಯಶಸ್ವಿ ಆಗುವುದರ ಜತೆಗೆ ಜೀವನದಲ್ಲಿ ಈ ದೇಶದ ಸಂಸ್ಕೃತಿ, ಸಂಸ್ಕಾರ ಅಳವಡಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.

ಬೆಂಗಳೂರಿನ ಕ್ಯೂ ಆ್ಯಂಡ್ ಜೆ ಸ್ಪೀಡರ್ ಕಂಪನಿ ಫೌಂಡರ್ ಸಿಇಒ ಗಿರೀಶ್ ಶಿವಣ್ಣ ಮಾತನಾಡಿ, ಈ ಕಾಲೇಜಿನ ಅನೇಕ ವಿದ್ಯಾರ್ಥಿಗಳು ನಮ್ಮ ಕಂಪನಿಯಲ್ಲಿ ಉನ್ನತ ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಪ್ರತಿವರ್ಷ 1.30 ಲಕ್ಷ ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದು, ಇದುವರೆಗೆ 12 ಲಕ್ಷ ಇಂಜಿನಿಯರ್ಸ್ ತಂತ್ರಾಂಶ ತಂತ್ರಜ್ಞಾನದಲ್ಲಿ ತರಬೇತಿ ಪಡೆದಿದ್ದಾರೆ. ಅನೇಕರು ದೇಶ ವಿದೇಶದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ತಿಳಿಸಿದರು.

ಕಾಲೇಜಿನ ಆಡಳಿತ ಮಂಡಳಿ ಸದಸ್ಯೆ ಮಲ್ಲಮ್ಮ ತಾಳಂಪಳ್ಳಿ, ಉಪ ಪ್ರಾಚಾರ್ಯ ಡಾ.ಅರುಣಕುಮಾರ ಯಲಾಲ, ಕುಲಸಚಿವ ಪ್ರೇಮಸಾಗರ ಪಾಟೀಲ, ಸಂಸ್ಥೆ ಅಧೀನದ ಶಾಲಾ-ಕಾಲೇಜು ಪ್ರಾಚಾರ್ಯರಾದ ವಿಶ್ವನಾಥ ಸ್ವಾಮಿ, ಎನ್.ಆರ್. ಕೋಡ್ಲೆ, ಶಿವಕುಮಾರ ಸ್ವಾಮಿ, ವಿವಿಧ ವಿಭಾಗದ ಮುಖ್ಯಸ್ಥರಾದ ಸುವರ್ಣಲತಾ, ಡಾ.ಸಂಜೀವಕುಮಾರ ಜಲ್ದೆ, ಡಾ.ಅನೀಲ ಪಾಟೀಲ, ಡಾ.ಸುದರ್ಶನ ಮೆತ್ರೆ, ವಿದ್ಯಾಸಾಗರ ಎಂ., ಗುರುರಾಜ ಪಿ., ಖಂಡೋಬಾ ಆರ್., ಕಚೇರಿ ಅಧೀಕ್ಷಕ ವೃಷಿಕೇತ ಭೂಸಾರೆ ಇತರರಿದ್ದರು.

ಸಂಸ್ಥೆ ನಿರ್ದೇಶಕರಾದ ಕಾಲೇಜು ಪ್ರಾಚಾರ್ಯ ಡಾ.ಅಶೋಕಕುಮಾರ ವಣಗೇರಿ ಸ್ವಾಗತಿಸಿ ಪ್ರಾಸ್ತಾವಿಕ ಮಾತನಾಡಿದರು. ಬಿಇಡಿ ಕಾಲೇಜು ಪ್ರಾಚಾರ್ಯ ಡಾ.ನಾಗಯ್ಯಾ ಸ್ವಾಮಿ ವಂದಿಸಿದರು. ವಿದ್ಯಾಸಾಗರ ಮೂಲಗೆ ನಿರೂಪಣೆ ಮಾಡಿದರು. ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.




ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜಿನಲ್ಲಿ ಭಾನುವಾರ ಆಯೋಜಿಸಿದ್ದ 26ನೇ ವಾರ್ಷಿಕೋತ್ಸವ ಅನ್ವೇಷಣಾ ಕಾರ್ಯಕ್ರಮವನ್ನು ಬಿಕೆಇಸಿ ಅಧ್ಯಕ್ಷ ದಿಲೀಪಕುಮಾರ ತಾಳಂಪಳ್ಳಿ ಉದ್ಘಾಟಿಸಿದರು. ಆಡಳಿತ ಮಂಡಳಿ ಸದಸ್ಯೆ ಮಲ್ಲಮ್ಮ ತಾಳಂಪಳ್ಳಿ, ಕ್ಯೂ ಆ್ಯಂಡ್ ಜೆ ಸ್ಪೀಡರ್ ಕಂಪನಿ ಸಿಇಒ ಗಿರೀಶ್ ಶಿವಣ್ಣ, ಡಾ.ಅಶೋಕಕುಮಾರ ವಣಗೇರಿ, ಡಾ.ಅರುಣಕುಮಾರ ಯಲಾಲ, ಶಿವಕುಮಾರ ಸ್ವಾಮಿ ಇದ್ದರು.

> ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶ್ರಮವಹಿಸಿ ವಿದ್ಯಾಭ್ಯಾಸ ಮಾಡಿ ಉತ್ತಮ ಅಂಕ, ಹುದ್ದೆ ಪಡೆಯುವ ಜತೆಗೆ ಒಳ್ಳೆಯ ಸಂಸ್ಕಾರ ಅಳವಡಿಸಿಕೊಳ್ಳಬೇಕು. ರಾಜ್ಯ ಮತ್ತು ದೇಶ ಸೇವೆಯಲ್ಲಿ ತೊಡಗಿಸಿಕೊಂಡು ಸರ್ವಾಂಗೀಣ ಬೆಳವಣಿಗೆಗೆ ತಮ್ಮ ಕೊಡುಗೆ ನೀಡಬೇಕು.
>
> | ಗಿರೀಶ್ ಶಿವಣ್ಣ
> ಸಿಇಒ ಕ್ಯೂ ಆ್ಯಂಡ್ ಜೆ ಸ್ಪೀಡರ್ ಕಂಪನಿ

ಉದಯಕಾಲ
ಕನ್ನಡಿಗರ ಜೀವಾಳ

# ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜಿನ 26ನೇ ವಾರ್ಷಿಕೋತ್ಸವ

ಬಸವಕಲ್ಯಾಣ: ಎಜ್ಯೂಕೇಶನಲ್ ಟ್ರಸ್ಟ್‌ನ ಉಪಾಧಕ್ಷ ಹಾಗೂ ಬಸವಕಲ್ಯಾಣ ಇಂಜಿನಿಯರಿಂಗ್ ಕಾಲೇಜಿನ ಅಧ್ಯಕ್ಷ ದೀಲಿಪಕುಮಾರ ಎಸ್. ತಾಳಂಪಳ್ಳಿಯವರ ಅಧ್ಯಕ್ಷತೆಯಲ್ಲಿ ಬಸವಕಲ್ಯಾಣ ಇಂಜೀನಿಯರಿಂಗ್ ಕಾಲೇಜಿನಲ್ಲಿ 26ನೇ ವಾರ್ಷಿಕೋತ್ಸವ ಜರುಗಿತು. ಕಾರ್ಯಕ್ರಮ ಉದ್ಘಾಟಿಸಿದ ನಂತರ ದಿಲಿಫ್ ತಾಳಂಪಳ್ಳಿಯವರು ಮಾತನಾಡಿ, ನಮ್ಮ-ನಿಮ್ಮೆಲ್ಲರ ಸಂಸ್ಥೆಯು ಶೈಕ್ಷಣಿಕ ಹಾಗೂ ಸಂಶೋಧನಾ ವಲಯದಲ್ಲಿ ಕಾರ್ಯನಿರ್ವಹಿಸುತ್ತಿದ್ದು ಹಾಗೂ ಇವತ್ತಿನ ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು, ಪದವಿ ಮುಗಿಸಿದರೆ ಸಾಲದು, ಜೊತೆ-ಜೊತೆಗೆ ಹೊಸ-ಹೊಸ ಟೆಕ್ನಾಲೋಜಿಗಳ ಬಗ್ಗೆ ಸಂಶೊಧನೆ ಮಾಡಬೇಕು ಮತ್ತು ಇನ್ನಿತರ ಸ್ಪರ್ದಾತ್ಮಕ ಪರೀಕ್ಷೆಗಳನ್ನು ಬರೆದು ಜೀವನದಲ್ಲಿ ಮುನ್ನುಗ್ಗಬೇಕು ಎಂದು ಹೇಳಿದರು. ಜೊತೆಗೆ ತಮ್ಮ ಜೀವನದಲ್ಲಿ, ಈ ದೇಶದ ಸನಾತನ ಕಾಲದ ಸಂಸ್ಕಾರವನ್ನು ಅಳವಡಿಸಿಕೊಳ್ಳಬೇಕೆಂದು ಹೇಳಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ ಬೆಂಗಳೂರಿನ ಕಂಪನಿಯ ಪೌಂಢರ್ ಸಿ.ಇ.ಓ. ಆದ ಗೀರಿಶ ಶಿವಣ್ಣಾರವರು ವಿದ್ಯಾರ್ಥಿಗಳಿಗೆ, ಈ ಕಾಲೇಜಿನ ಹಲವಾರು ವಿದ್ಯಾರ್ಥಿಗಳು ನಮ್ಮದೇ ಆದ ಕಂಪನಿಯಲ್ಲಿ ಒಳ್ಳೆಯ ಹುದ್ದೆಯ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದಾರೆ ಹಾಗೂ ಕಂಪನಿಯಲ್ಲಿ ಪ್ರತಿ ವರ್ಷ 1 ಲಕ್ಷ 30 ಸಾವಿರ




ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದು, ಇವತ್ತಿನ ತನಕ 12 ಲಕ್ಷ ಇಂಜಿನಿಯರ್ಸ್ ತಂತ್ರಾಂಶ ತಂತ್ರಜ್ಞಾನದಲ್ಲಿ ತರಬೇತಿ ಪಡೆದಿರುತ್ತಾರೆ ಹಾಗೂ ಈ ಕಂಪನಿ ವತಿಯಿಂದ ದೇಶ-ವಿದೇಶನಲ್ಲಿ 72 % ಇಂಜಿನಿಯರ್ಸ್‌ಗಳು ಮಾಹಿತಿ ತಂತ್ರಜ್ಞಾನ ಒಂದರಲ್ಲಿಯೇ ಕಾರ್ಯನಿರ್ವಹಿಸುತ್ತಿದ್ದಾರೆ ಎಂದು ಹೇಳಿದರು. ಕಾಲೇಜಿನ ಆಡಳಿತ ಮಂಡಳಿಯ ಸದಸ್ಯರಾದ ಮಲ್ಲಮ್ಮಾ ತಾಳಂಪಳ್ಳಿಯವರು ಉಪಸ್ಥಿತರಿದ್ದರು. ಸಂಸ್ಥೆಯ ನಿರ್ದೇಶಕರು ಹಾಗೂ ಕಾಲೇಜಿನ ಪ್ರಾಚಾರ್ಯ ಡಾ. ಅಶೋಕಕುಮಾರ ವಣಗೇರಿಯವರು ಸ್ವಾಗತಿಸಿದರು. ವಿದ್ಯಾಸಾಗರ ಮೂಲಗೆ ನಿರೂಪಿಸಿದರು ಹಾಗೂ ಬಿಎಡ್. ಕಾಲೇಜಿನ ಪ್ರಾಚಾಯ ಡಾ: ನಾಗಯ್ಯಾ ಸ್ವಾಮಿಯವರು ವಂದಿಸಿದರು. ನಂತರ, ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

ಉಪ-ಪ್ರಾಚಾರ್ಯ ಡಾ. ಅರುಣಕುಮಾರ ಯಲಾಲ, ಕಾಲೇಜಿನ ಕುಲಸಚಿವರು ಪ್ರೇಮಸಾಗರ ಪಾಟೀಲ ಹಾಗೂ ಸಂಸ್ಥೆಯ ಅಡಿಯಲ್ಲಿ ನಡೆಯುತ್ತಿರುವ ಬಸವಕಲ್ಯಾಣ ಬಿ. ಎಡ್. ಕಾಲೇಜಿನ ಪ್ರಾಚಾರ್ಯ ಡಾ. ನಾಗಯ್ಯಾ ಸ್ವಾಮಿ, ಪಿ.ಯು.ಸಿ. ಹಾಗೂ ಡಿಗ್ರಿ ಕಾಲೇಜಿನ ಪ್ರಾಚಾರ್ಯ ವಿಶ್ವನಾಥ ಸ್ವಾಮಿ, ಪಾಲಿಟೇಕ್ನಿಕ್ ಕಾಲೇಜಿನ ಪ್ರಾಚಾರ್ಯರು, ಎನ್. ಆರ್. ಕೋಡ್ಲೆ, ಆಯ್.ಟಿ.ಆಯ್. ಕಾಲೇಜಿನ ಪ್ರಾಚಾರ್ಯ ಶಿವಕುಮಾರ ಸ್ವಾಮಿ, ವಿವಿಧ ವಿಭಾಗದ ಮುಖ್ಯಸ್ಥರಾದ ಸುವರ್ಣಾಲತಾ, ಡಾ. ಸಂಜೀವಕುಮಾರ ಜಲ್ದೇ, ಡಾ. ಅನೀಲ ಪಾಟೀಲ, ಡಾ. ಸುದರ್ಶನ ಮೆತ್ರೇ, ವಿದ್ಯಾಸಾಗರ ಎಂ, ಗುರುರಾಜ ಪಿ. ಖಂಡೋಬಾ ಆರ್. ಹಾಗೂ ಆಫೀಸ್ ಸೂಪರಿಂಟೆಂಡೆಂಟ್ ವೃಷಿಕೇತ ಭೂಸಾರೆ, ಮತ್ತು ಎಲ್ಲಾ ಕಾಲೇಜಿನ ಶಿಕ್ಷಕ ಸಿಬ್ಬಂದಿ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

## ಬಸವಕಲ್ಯಾಣ ಎಂಜಿನಿಯರಿಂಗ್ ಕಾಲೇಜು ವಾರ್ಷಿಕೋತ್ಸವ

# ಸಂಶೋಧನೆ ಮಾಡಲು ವಿದ್ಯಾರ್ಥಿಗಳಿಗೆ ಸಲಹೆ




ಬಸವಕಲ್ಯಾಣದ ಎಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ 26ನೇ ವಾರ್ಷಿಕೋತ್ಸವ ಕಾರ್ಯಕ್ರಮದಲ್ಲಿ ಅಧ್ಯಕ್ಷ ದೀಲಿಪಕುಮಾರ ತಾಳಂಪಳ್ಳಿ, ಗಿರೀಶ ಶಿವಣ್ಣಾ ಇದ್ದರು.

■ **ವಿಕ ಸುದ್ದಿಲೋಕ** ಬಸವಕಲ್ಯಾಣ

ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಪದವಿ ಮುಗಿಸಿದರೆ ಸಾಲದು. ಹೊಸ-ಹೊಸ ತಂತ್ರಜ್ಞಾನದ ಬಗ್ಗೆ ಸಂಶೊಧನೆ ಮಾಡಬೇಕು ಎಂದು ಬಸವಕಲ್ಯಾಣ ಶಿಕ್ಷಣ ಟ್ರಸ್ಟ್ ಉಪಾಧ್ಯಕ್ಷರಾದ ಬಸವಕಲ್ಯಾಣ ಎಂಜಿನಿಯರಿಂಗ್ ಕಾಲೇಜಿನ ಅಧ್ಯಕ್ಷ ದೀಲಿಪ ಕುಮಾರ ತಾಳಂಪಳ್ಳಿ ಹೇಳಿದರು.

ನಗರದ ಬಸವಕಲ್ಯಾಣ ಎಂಜಿನಿಯರಿಂಗ್ ಕಾಲೇಜಿನ ಸಭಾಂಗಣದಲ್ಲಿ ನಡೆದ 26ನೇ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಬರೆದು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು. ದೇಶದ ಸನಾತನ ಕಾಲದ ಸಂಸ್ಕಾರ ಆಳವಡಿಸಿಕೊಳ್ಳಬೇಕು ಎಂದರು.

ಬೆಂಗಳೂರಿನ ಕ್ಯೂ ಮತ್ತು ಜೆ ಸ್ಪೈಡರ್ ಕಂಪನಿಯ ಸಿಇಒ ಗಿರೀಶ ಶಿವಣ್ಣ ಮಾತನಾಡಿ, ಈ ಕಾಲೇಜಿನ ಪ್ರತಿಭಾನ್ವಿತ ವಿದ್ಯಾರ್ಥಿಗಳು ನಮ್ಮ ಕಂಪನಿಯಲ್ಲಿ ಒಳ್ಳೆಯ ಹುದ್ದೆಯ ಮೇಲೆ ಕರ್ತವ್ಯನಿರ್ವಹಿಸುತ್ತಿದ್ದಾರೆ. ಪ್ರತಿ ವರ್ಷ 1.30 ಲಕ್ಷ ವಿದ್ಯಾರ್ಥಿಗಳು ತರಬೇತಿ ಪಡೆಯುತ್ತಿದ್ದು, 12 ಲಕ್ಷ ಎಂಜಿನಿಯರ್ಸ್ ತಂತ್ರಾಂಶ ತಂತ್ರಜ್ಞಾನದಲ್ಲಿ ತರಬೇತಿ ಪಡೆದಿದ್ದಾರೆ ಎಂದು ಹೇಳಿದರು.

ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಉತ್ತಮ ವಿದ್ಯಾಭ್ಯಾಸ ಮಾಡಿ ಒಳ್ಳೆಯ ಅಂಕಗಳನ್ನು ಪಡೆದು ಉನ್ನತ ಹುದ್ದೆಯ ಜತೆಗೆ ಒಳ್ಳೆಯ ಸಂಸ್ಕಾರ ಆಳವಡಿಸಿಕೊಂಡು ರಾಜ್ಯ ಹಾಗೂ ದೇಶದ ಸೇವೆಯಲ್ಲಿ ತೊಡಗಬೇಕು ಎಂದು ಸಲಹೆ ನೀಡಿದರು.

ಕಾಲೇಜಿನ ಆಡಳಿತ ಮಂಡಳಿ ಸದಸ್ಯೆ ಮಲ್ಲಮ್ಮತಾಳಂಪಳ್ಳಿ, ಉಪಪ್ರಾಚಾರ್ಯ ಡಾ.ಅರುಣಕುಮಾರ ಯಲಾಲ, ಪ್ರೇಮಸಾಗರ ಪಾಟೀಲ, ಡಾ.ನಾಗಯ್ಯ ಸ್ವಾಮಿ, ವಿಶ್ವನಾಥ ಸ್ವಾಮಿ, ಎನ್. ಆರ್. ಕೋಡ್ಲೆ, ಶಿವಕುಮಾರ ಸ್ವಾಮಿ, ಸುವರ್ಣಾ ಲತಾ, ಡಾ.ಸಂಜೀವ ಕುಮಾರ ಜಲ್ದೆ, ಡಾ.ಅನಿಲ್ ಪಾಟೀಲ, ಡಾ.ಸುದರ್ಶನ ಮೆತ್ರೆ, ವಿದ್ಯಾಸಾಗರ ಎಂ., ಗುರುರಾಜ ಪಿ., ಖಂಡೋಬಾ ಆರ್., ವೃಷಿಕೇತ ಭೂಸಾರೆ ಇತರರಿದ್ದರು. ಪ್ರಾಚಾರ್ಯ ಡಾ.ಅಶೋಕ ಕುಮಾರ ವಣಗೇರಿ ಸ್ವಾಗತಿಸಿದರು. ವಿದ್ಯಾಸಾಗರ ಮೂಲಗೆ ನಿರೂಪಿಸಿದರು. ಡಾ.ನಾಗಯ್ಯ ಸ್ವಾಮಿ ವಂದಿಸಿದರು. ವಿದ್ಯಾರ್ಥಿ-ವಿದ್ಯಾರ್ಥಿನಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.